# 214 (NS)

**ಕರ್ನಾಟಕ ಮುಕ್ತ ಶಾಲೆಗಳ ಪರೀಕ್ಷೆ, ಮಾರ್ಚ್ / ಏಪ್ರಿಲ್, 2019**

**Karnataka Open School Examination, March / April, 2019**

# ಅರ್ಥಶಾಸ್ತ್ರ

# ECONOMICS

**(ಹೊಸ ಪಠ್ಯಕ್ರಮ)**

**(New Syllabus)**

ದಿನಾಂಕ : 23. 03. 2019 ]

Date : 23. 03. 2019 ]

ಸಮಯ : ಮಧ್ಯಾಹ್ನ 2.00 ರಿಂದ 5.00 ರವರೆಗೆ ] [ ಗರಿಷ್ಠ ಅಂಕಗಳು : 100

Time : 2.00 P.M. to 5.00 P.M. ] [ Maximum Marks : 100

***ಸೂಚನೆಗಳು :*** i) ಎಲ್ಲಾ ಪ್ರಶ್ನೆಗಳೂ ಕಡ್ಡಾಯ.

ii) ಪ್ರಶ್ನೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ತಪ್ಪದೇ ನಮೂದಿಸಿ.

iii) ಉತ್ತರಗಳು ನೇರವಾಗಿರಲಿ ಹಾಗೂ ಸಂಕ್ಷಿಪ್ತವಾಗಿರಲಿ.

I. **ಈ ಕೆಳಕಂಡ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಉತ್ತರದಿಂದ ತುಂಬಿ :** 5 × 1 = 5

1) ಗೇಣಿ ಮತ್ತು ಬಡ್ಡಿಗಳು ...................... ರ ಆದಾಯಗಳಾಗಿವೆ.

2) ಬೆಲೆಗಳು ಸ್ಥಿರವಾಗಿದ್ದಾಗ ಆದಾಯದಲ್ಲಿನ ಇಳಿತವು ಖರೀದಿದಾರನಿಗೆ ...................... ಪ್ರಮಾಣದಲ್ಲಿ ಖರೀದಿಸಲು ಒತ್ತಾಯಿಸುತ್ತದೆ.

3) ರಫ್ತುದಾರರು ತನ್ನ ಉತ್ಪನ್ನವನ್ನು ...................... ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾರೆ.

4) ...................... ಲಾಭ ಗಳಿಕೆಯೇ ಮಾರಾಟಗಾರನ ಮುಖ್ಯ ಉದ್ದೇಶವಾಗಿದೆ.

5) ದೇಶದ ಒಟ್ಟು ಆದಾಯವು ಆ ದೇಶದಲ್ಲಿ ...................... ಸರಕು ಮತ್ತು ಸೇವೆಗಳ ಹಣರೂಪಿ ಮೌಲ್ಯವಾಗಿದೆ.

II. **ಈ ಕೆಳಗಿನ ವಾಕ್ಯಗಳು ಸರಿಯೋ ಅಥವಾ ತಪ್ಪೋ ತಿಳಿಸಿ :** 5 × 1 = 5

6) ಆಧುನಿಕ ಮಾನವನಿಗೆ ವ್ಯಾಪಾರ ಅವಶ್ಯಕವಾಗಿದೆ.

7) ಕುಟುಂಬದಲ್ಲಿರುವ ಸದಸ್ಯರ ಸಂಖ್ಯೆಯ ಹೆಚ್ಚಳದಿಂದಾಗಿ ಕುಟುಂಬದ ಅಗತ್ಯತೆ ಸ್ಥಿರವಾಗಿ ಉಳಿದಿದೆ.

8) ಹೆಚ್ಚಿನ ಸರ್ಕಾರಿ ಮಾರಾಟಗಾರರ ಪ್ರಾಥಮಿಕ ಉದ್ದೇಶ ಗರಿಷ್ಠ ಲಾಭಗಳಿಕೆಯಾಗಿದೆ.

9) ನೈಸರ್ಗಿಕ ಅಂಶಗಳು ಅಂತಾರಾಷ್ಟ್ರೀಯ ವ್ಯಾಪಾರದ ಮೇಲೆ ಪ್ರಭಾವಬೀರುತ್ತವೆ.

10) ಓದು ಮತ್ತು ಬರಹ ಬಲ್ಲವರನ್ನು ಅನಕ್ಷರಸ್ಥರು ಎಂದು ಕರೆಯುತ್ತಾರೆ ?

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ :** 10 × 1 = 10

11) ಬಯಕೆಗಳು ಹೇಗೆ ಹುಟ್ಟುತ್ತವೆ ?

12) ಮನೋಭಾವ ಎಂದರೇನು ?

13) ಋಣಾತ್ಮಕ ಪ್ರೇರಣೆ ಎಂದರೇನು ?

14) ಮಧ್ಯವರ್ತಿ ಮಾರಾಟಗಾರರು ಯಾರು ?

15) ತಲಾ ಆದಾಯ ಲೆಕ್ಕಾಚಾರದ ಸೂತ್ರ ಬರೆಯಿರಿ.

16) ಆರ್ಥಿಕತೆಗಳಲ್ಲಿ ಮೂರು ವಿಧಗಳನ್ನು ತಿಳಿಸಿ.

17) ವಿಶ್ವದಲ್ಲೇ ಅತೀ ಹೆಚ್ಚು ಚಿನ್ನವನ್ನು ಉತ್ಪಾದಿಸುವ ರಾಷ್ಟ್ರ ಯಾವುದು ?

18) ವಿಶ್ವ ವ್ಯಾಪಾರ ಎಂದರೇನು ?

19) ಮಾಲಿನ್ಯ ಎಂದರೇನು ?

20) ಜನಸಂಖ್ಯೆ ಎಂದರೇನು ?

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ :** 10 × 2 = 20

21) ಬಯಕೆಗಳ ಪ್ರಕಾರಗಳು ಯಾವುವು ?

22) ಏಕೋಪಯೋಗಿ ಮತ್ತು ದೀರ್ಘೋಪಯೋಗಿ ಸರಕುಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

23) ಸೇವಾ ವಲಯದ ಉದ್ಯೋಗಗಳಿಗೆ ಎರಡು ಉದಾಹರಣೆ ನೀಡಿ.

24) ಬಡದೇಶಗಳು ಶ್ರೀಮಂತ ರಾಷ್ಟ್ರಗಳಿಂದ ಬಂಡವಾಳ ಪಡೆಯಲು ಯಾವುದಾದರೂ ಎರಡು ಮಾರ್ಗಗಳನ್ನು ತಿಳಿಸಿ.

25) ಸಾಟಿ ಪದ್ಧತಿಯ ಎರಡು ಅನಾನುಕೂಲಗಳನ್ನು ತಿಳಿಸಿ.

26) ಮಿಶ್ರ ಆರ್ಥಿಕತೆ ಎಂದರೇನು ?

27) ವಿಶ್ವ ವ್ಯಾಪಾರವನ್ನು ಪ್ರಭಾವಿಸುವ ವಿವಿಧ ಅಂಶಗಳು ಯಾವುವು ?

28) ನೈಸರ್ಗಿಕ ಸಂಪನ್ಮೂಲಗಳನ್ನು ಎಲ್ಲಿಂದ ಒದಗಿಸಲಾತ್ತದೆ ? ನೈಸರ್ಗಿಕ ಸಂಪನ್ಮೂಲಗಳ ಎರಡು ಪ್ರಕಾರಗಳನ್ನು ತಿಳಿಸಿ.

29) ಶಬ್ಧ ಮಾಲಿನ್ಯದ ಮೂಲಗಳನ್ನು ತಿಳಿಸಿ.

30) ಲಿಂಗ ಅನುಪಾತ ಎಂದರೇನು ? ಭಾರತದಲ್ಲಿ 1991 ರಲ್ಲಿ ಲಿಂಗ ಅನುಪಾತವು ಎಷ್ಟು ಆಗಿತ್ತು ?

V. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಐದು ವಾಕ್ಯಗಳಲ್ಲಿ ಉತ್ತರಿಸಿ :** 10 × 3 = 30

31) ಉತ್ಪಾದನಾ ವಿಧಾನದ ಆಯ್ಕೆಗಳು ಯಾವುವು ?

32) ಉತ್ಪಾದನಾ ಘಟಕದ ಉತ್ಪಾದನಾಂಗಗಳು ಯಾವುವು ?

33) ಉತ್ಪಾದನೆಯನ್ನು ಹೆಚ್ಚಿಸಲು ಮಾರ್ಗಗಳನ್ನು ತಿಳಿಸಿ.

34) ಹೂಡಿಕೆ ಆಧಾರದ ಮೇಲೆ ಉತ್ಪಾದನಾ ಘಟಕಗಳನ್ನು ಹೇಗೆ ವರ್ಗೀಕರಿಸಬಹುದು ?

35) ಸರ್ಕಾರದ ಸೇವೆಗಳಲ್ಲಿ ಸುಧಾರಣೆ ತರಲು ಯಾವುದಾದರೂ ಕ್ರಮಗಳನ್ನು ತಿಳಿಸಿ.

36) ಆದಾಯ ಅಸಮಾನತೆಗೆ ಕಾರಣವಾಗುವ ಅಂಶಗಳನ್ನು ತಿಳಿಸಿ.

37) ಶೋಷಣೆಯಿಂದ ಮಹಿಳೆಯರನ್ನು ರಕ್ಷಿಸಲು ಇರುವ ಶಾಸನಾತ್ಮಕ ಕ್ರಮಗಳನ್ನು ಚರ್ಚಿಸಿ.

38) ಬೇಡಿಕೆಯ ನಿರ್ಧಾರಕಗಳನ್ನು ಪಟ್ಟಿ ಮಾಡಿ.

39) ಮಾರುಕಟ್ಟೆ ಬೆಲೆ ಎಂದರೇನು ? ಮಾರಾಟಗಾರ ಬೆಲೆ ನಿಗದಿಪಡಿಸುವ ನಿರ್ಧಾರದ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು ?

40) ಬೆಲಯ ಮೇಲೆ ಪೂರೈಕೆ ಮತ್ತು ನೀಡಿಕೆಯ ಪ್ರಭಾವವನ್ನು ತಿಳಿಸಿ.

VI. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ :** $5 \times 4 = 20$

41) ಭೂಮಿ ಎಂದರೇನು ? ಭೂಮಿಯ ಲಕ್ಷಣಗಳನ್ನು ವಿವರಿಸಿ.

42) ಭಾರತದಂತಹ ದೇಶದಲ್ಲಿ ಸರ್ಕಾರ ಒದಗಿಸುವ ವೈವಿಧ್ಯಮಯ ಸೇವೆಗಳಾವುವು ಎಂದು ವಿವರಿಸಿ.

43) ಈ ಕೆಳಗಿನ ಕೋಷ್ಟಕದಲ್ಲಿ ವಿವಿಧ ದೇಶಗಳು ಮತ್ತು ಅವುಗಳ ಜನನ ದರವನ್ನು ನೀಡಲಾಗಿದೆ. ಇದಕ್ಕೆ ಸ್ತಂಭರೇಖಾ ಚಿತ್ರ ರಚಿಸಿ :

| *ದೇಶ* | *ಜನನದರ* |
|---|---|
| ಜಪಾನ್ | 10 |
| ಆಸ್ಟ್ರೇಲಿಯಾ | 15 |
| ಕೊರಿಯಾ ರಿಪಬ್ಲಿಕ್ | 20 |
| ಚೀನಾ | 25 |
| ಭಾರತ | 30 |

44) ಮುಕ್ತ ಮಾರುಕಟ್ಟೆ ಆರ್ಥಿಕತೆಯ ಅನುಕೂಲಗಳನ್ನು ತಿಳಿಸಿ.

45) ಅಭಿವೃದ್ಧಿಯ ಮೇಲೆ ಜನಸಂಖ್ಯೆಯ ಪರಿಣಾಮಗಳು ಯಾವುವು ?

VII. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಹತ್ತು ಅಥವಾ ಹನ್ನೆರಡು ವಾಕ್ಯಗಳಲ್ಲಿ ಉತ್ತರಿಸಿ :** $2 \times 5 = 10$

46) ಸಣ್ಣ ಪ್ರಮಾಣದ ಘಟಕಗಳ ಪ್ರಾಮುಖ್ಯತೆಗಳನ್ನು ವಿವರಿಸಿ.

47) ಪ್ರೇರಣೆ ಎಂದರೇನು ? ಪ್ರೇರಣೆಯ ಪ್ರಕಾರಗಳನ್ನು ವಿವರಿಸಿ.